ರೈತರು ಸ್ವತಃ ಬೀಜ ಸಂಗ್ರಹಿಸಿ ಸ್ವಾವಲಂಬಿಗಳಾಗಲಿ

ಉದಯಕಾಲ ನ್ಯೂಸ್, ಹೆಚ್.ಡಿ.ಕೋಟೆ: ಪೀಪಲ್ ಟ್ರೀ ಸಂಸ್ಥೆ ಮತ್ತು ತಾಲೂಕು ಹವಮಾನ ಕ್ರಿಯಾ ಸಮಿತಿ ವತಿಯಿಂದ ಸಾವಯವ ಕೃಷಿ ಸಿರಿಧಾನ್ಯ ಬೆಳೆಯ ಕುರಿತು ತರಬೇತಿ ಆಯೋಜಿಸಲಾಗಿತ್ತು.

ಇತ್ತೀಚಿನ ದಿನಗಳಲ್ಲಿ ಬಿತ್ತನೆ ಬೀಜಗಳು ಕಳಪೆ ಗುಣಮಟ್ಟದಿಂದ ಕೂಡಿದ್ದು ನಮ್ಮ ರೈತರು ಕಂಗಾಲಾಗಿದ್ದಾರೆ. ನಮ್ಮ ರೈತರು ನಿಧಾನ ಗತಿಯಲ್ಲಿ ಸಾವಯವ ಕೃಷಿ ಮಾಡುವ ಪದ್ಧತಿಗೆ ಬರುತ್ತಿರುವುದು ವಿಶೇಷ. ಇದನ್ನು ಅರಿತ ಪೀಪಲ್ ಟ್ರೀ ಸಂಸ್ಥೆಯು ಹೆಚ್.ಡಿ. ಕೋಟೆಯ 12 ಗ್ರಾಮ ಪಂಚಾಯಿತಿಯ ಸಂಬಂಧಪಟ್ಟ ಗ್ರಾಮಗಳಿಂದ ಸಿರಿಧಾನ್ಯ ಸೋದರಿಯರು ಹಾಗೂ ರೈತರು ಹಾಗೂ ಗ್ರಾಮ ಪಂಚಾಯಿತಿ ಸದಸ್ಯರನ್ನು ಒಳಗೊಂಡಂತೆ ಅಧ್ಯಯನ ಪ್ರವಾಸಕ್ಕೆ ಕರೆದುಕೊಂಡು ಹೋಗಲಾಗಿತ್ತು.

ಕುಶಾಲನಗರದ ಅಫ್ತಾಬ್ ಎಂ.ಬಿ ಅವರು ಸುಮಾರು 50 ವರ್ಷಗಳಿಂದ ಸಾವಯವ ಕೃಷಿ ಮಾಡುತ್ತಿದ್ದು,

ಸ್ವತಃ ಅವರೇ ಬಿತ್ತನೆ ಬೀಜಗಳನ್ನು ಶೇಖರಣೆ ಮಾಡುತ್ತಿದ್ದಾರೆ. ರೈತರು ಹೇಗೆ ಬಿತ್ತನೆ ಬೀಜಗಳನ್ನು ಶೇಖರಣೆ ಮಾಡಬೇಕು, ಇದರಿಂದ ಸಾವಯವ ಕೃಷಿಗೆ ಮಾರ್ಪಾಡು ಮಾಡುವ ಮತ್ತು ಸಿರಿಧಾನ್ಯಕ್ಕೆ ಉತ್ತೇಜನ ನೀಡುವ ನಿಟ್ಟಿನಲ್ಲಿ ರೈತರೊಂದಿಗೆ ಸಂವಾದ ನಡೆಸಲಾಯಿತು.

ಇತ್ತೀಚಿನ ದಿನಗಳಲ್ಲಿ ರಾಸಾಯನಿಕ ಗೊಬ್ಬರ, ಔಷಧಿಗಳ ಬಳಕೆಯಿಂದ ಭೂಮಿಯು ಸತ್ವವನ್ನು ಕಳೆದುಕೊಳ್ಳುತ್ತಿದ್ದು, ಇದರಿಂದ ಭೂಮಿಗೆ ಹಾಕಿದ ಬೀಜಗಳಿಂದ ಬೆಳೆ ಬಾರದೆ ರೈತರು ಸಾಲದ ಸುಳಿಯಲ್ಲಿ ಸಿಲುಕಿ ಕಂಗಾಲಾಗಿರುವ ದೃಶ್ಯ ನಮ್ಮ ಕಣ್ಮುಂದೆ ನೋಡುತ್ತಿದ್ದೇವೆ. ಇದರಿಂದ ರೈತರು ಧೃತಿಗೆಡುವುದು ಬೇಡ. ಇದಕ್ಕೆ ಪರ್ಯಾಯವಾಗಿ ನಾವೇ ನಮ್ಮ ಜಮೀನಿನಲ್ಲಿ ಉತ್ತಮ ಗುಣಮಟ್ಟದ ಬೀಜವನ್ನು ಸಂಗ್ರಹಿಸಿ ಶೇಖರಣೆ ಮಾಡೋಣ. ಈ ಮೂಲಕ ನಾವೇ ಸ್ವಾವಲಂಬಿಗಳಾಗೋಣ ಎಂದು ವಿಶೇಷವಾಗಿ ತರಬೇತಿ ನೀಡಿದರು.

ಕಾರ್ಯಕ್ರಮದಲ್ಲಿ ಪೀಪಲ್ ಟ್ರೀ ಸಂಸ್ಥೆಯ ಜವರೇಗೌಡ, ಲತಾ, ಸುರೇಶ್, ಬಸಪ್ಪ, ಕುಮಾರಿ, ರತ್ನ, ಮಂಜುಳಾ, ಗ್ರಾಮ ಪಂಚಾಯಿತಿ ಸದಸ್ಯರಾದ ಮರಲಿಂಗಯ್ಯ, ಟಿ.ಮಂಜು, ಇಂದ್ರಮ್ಮ, ರೇಖಾ, ಜಯ, ಬ್ಯಾಟರಾಯ ಸ್ವಾಮಿ, ರೀನಾ, ವಿಜಯಲಕ್ಷ್ಮಿ, ಶ್ರೀನಿವಾಸ, ಸಮುದಾಯದ ನಾಯಕರು ಸೇರಿದಂತೆ ಸಿರಿಧಾನ್ಯ ಸೋದರಿಯರು, ರೈತರು ಹಾಗೂ ಹವಮಾನ ಕ್ರಿಯಾ ಸಮಿತಿಯ ತಾಲೂಕು ಅಧ್ಯಕ್ಷ ಎಡತೊರೆ ಮಹೇಶ್ ಭಾಗವಹಿಸಿದ್ದರು.

ಸಾರ್ವಜನಿಕರ ಸಮಸ್ಯೆ ಆಲಿಸಿದ ಮಂಜುನಾಥ್

ಉದಯಕಾಲ ನ್ಯೂಸ್, ಕೋಲಾರ: ಶಾಸಕ ಕೊತ್ತೂರು ಮಂಜುನಾಥ್ ಅವರು ಸೋಮವಾರ ತಮ್ಮ ಕಚೇರಿಯಲ್ಲಿ ಸಾರ್ವಜನಿಕರಿಂದ ಕುಂದುಕೊರತೆಗಳನ್ನು ಆಲಿಸಿ ವಿವಿಧ ಸಮಸ್ಯೆಗಳಿಗೆ ಸಂಬಂಧಿಸಿದ ಅಧಿಕಾರಿಗಳಿಗೆ ತಕ್ಷಣ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದರು.

ಈ ವೇಳೆ ಕ್ಷೇತ್ರದ ಬಡ ವಿದ್ಯಾರ್ಥಿಗಳ ಉನ್ನತ ಶಿಕ್ಷಣಕ್ಕೆ ಆರ್ಥಿಕ ನೆರವು ನೀಡುವ ಉದ್ದೇಶದಿಂದ ಸಲ್ಲಿಕೆಯಾಗಿದ್ದ 300ಕ್ಕೂ ಹೆಚ್ಚು ಅರ್ಜಿಗಳನ್ನು ಪರಿಶೀಲಿಸಿದ ಅವರು, ಈ ತಿಂಗಳ ತಮ್ಮ ಶಾಸಕರ ಸಂಬಳದ ಜೊತೆಗೆ ಸ್ವಂತ ಹಣವನ್ನೂ ಸೇರಿಸಿ ಅರ್ಹ ವಿದ್ಯಾರ್ಥಿಗಳಿಗೆ ಧನಸಹಾಯ ನೀಡಲು ನಿರ್ಧರಿಸಿದರು. ಸ್ಥಳದಲ್ಲೇ ಒಬ್ಬ ಅರ್ಹ ವಿದ್ಯಾರ್ಥಿಗೆ 50 ಸಾವಿರ ಮೊತ್ತದ ಚೆಕ್ ವಿತರಿಸಿದರು.

ವಿದ್ಯಾರ್ಥಿಗಳ ಆರ್ಥಿಕ ಪರಿಸ್ಥಿತಿ ಹಾಗೂ ವಿದ್ಯಾಭ್ಯಾಸದ ಅಗತ್ಯತೆಗಳನ್ನು ವೈಯಕ್ತಿಕವಾಗಿ ಆಲಿಸಿದ ಶಾಸಕರು, ಅರ್ಹ ಫಲಾನುಭವಿಗಳಿಗೆ ಶೀಘ್ರದಲ್ಲೇ ಸಹಾಯಧನ ವಿತರಿಸುವಂತೆ ಕಚೇರಿ ಸಿಬ್ಬಂದಿಗೆ ಸೂಚನೆ ನೀಡಿದರು.

ಸಾರ್ವಜನಿಕರಿಂದ ಬಂದಿದ್ದ ವಿವಿಧ ಸಮಸ್ಯೆಗಳ ಕುರಿತು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ದೂರವಾಣಿ ಮೂಲಕ ಮಾತನಾಡಿ, ಜನರ ಸಮಸ್ಯೆಗಳನ್ನು ವಿಳಂಬವಿಲ್ಲದೆ ಬಗೆಹರಿಸುವಂತೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕರು, ನನಗೆ ಬರುವ ಶಾಸಕರ ಮಾಸಿಕ ಸಂಬಳ ನನಗಲ್ಲ, ಅದು ನನ್ನ ಕ್ಷೇತ್ರದ ಬಡ ವಿದ್ಯಾರ್ಥಿಗಳ ಶಿಕ್ಷಣ ಮತ್ತು ಜನರ ಆರೋಗ್ಯಕ್ಕಾಗಿ ಮೀಸಲಾಗಿದೆ ಎಂದು ಹೇಳಿದರು. ಜಿಲ್ಲಾ ಗ್ಯಾರಂಟಿ ಸಮಿತಿ ಅಧ್ಯಕ್ಷ ವೈ. ಶಿವಕುಮಾರ್, ಕುಡಾ ಅಧ್ಯಕ್ಷ ಮಹಮ್ಮದ್ ಹನೀಫ್ ಗ್ರಾಮಾಂತರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮೈಲಾಂಡಹಳ್ಳಿ ಮುರಳಿ, ಕಾಂಗ್ರೆಸ್ ಮುಖಂಡ ನುಕ್ಕನಹಳ್ಳಿ ಶ್ರೀನಿವಾಸ್, ಮಡಿವಾಳ ಬೈರೇಗೌಡ ಸೇರಿದಂತೆ ಹಲವರು ಉಪಸ್ಥಿತರಿದ್ದರು.

CAUTION- Readers are advised to make appropriate enquiries while responding to advertisements in these columns. Anikethana Publication and Printers, does not vouch for any claims made by the advertisers. The Printer, Publisher, Editor and Owner of Anikethana Publication and Printers., shall not be held responsible/liable for any consequences, in case such claims are found to be false.

ಗೌರವಾನ್ವಿತ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕೃಷ್ಣರಾಜಪೇಟೆ, ಮಂಡ್ಯ ಜಿಲ್ಲೆ

ಕ್ರಿಮಿನಲ್ ಸಂಕೀರ್ಣ ಅರ್ಜಿ ಸಂಖ್ಯೆ:80/2026

ಅರ್ಜಿದಾರರು: 1)ಪುಟ್ಟಸಿದ್ದಮ್ಮ ಬಿನ್ ಲೇಟ್ ನಂಜಯ್ಯ, ಸುಮಾರು 72 ವರ್ಷ, 2)ಕೃಷ್ಣ ಬಿನ್ ಲೇಟ್ ನಂಜಯ್ಯ ಸುಮಾರು 57 ವರ್ಷ, 3) ಗೋವಿಂದರಾಜು @ ಗೋವಿಂದಯ್ಯ ಬಿನ್ ಲೇಟ್ ನಂಜಯ್ಯ ಸುಮಾರು 54 ವರ್ಷ, ಬಿ.ಕಾಳೇನಹಳ್ಳಿ ಗ್ರಾಮ, ಬಾಗೂರು ಹೋಬಳಿ ಚಿನ್ನರಾಯಪಟ್ಟಣ ತಾಲ್ಲೂಕು. ಹಾಸನ ಜಿಲ್ಲೆ. 4) ಭಾಗ್ಯಮ್ಮ ಕೋಂ ರಮೇಶ ಬಿನ್ ಲೇಟ್ ನಂಜಯ್ಯ ಸುಮಾರು 48 ವರ್ಷ ಹೂವಿನಹಳ್ಳಿ ಗ್ರಾಮ, ಅಗ್ರಹಾರಬೆಳಗೂಲಿ ಗ್ರಾಮ, ಚಿನ್ನರಾಯಪಟ್ಟಣ ತಾಲ್ಲೂಕು. ಹಾಸನ ಜಿಲ್ಲೆ. 5) ಶ್ರೀನಿವಾಸ. ಹೆಚ್.ಜಿ. ಬಿನ್ ಗೋವಿಂದರಾಜು ಸುಮಾರು 29 ವರ್ಷ. 1, 2 ಮತ್ತು 5ನೇ ಅರ್ಜಿದಾರರ ವಾಸ: ಹೊಸಹೊಳಲು ಗ್ರಾಮ ಕಸಬಾ ಹೋಬಳಿ, ಕೃಷ್ಣರಾಜಪೇಟೆ ತಾಲ್ಲೂಕು. ಮಂಡ್ಯ ಜಿಲ್ಲೆ

ವಿರುದ್ಧ

ಎದುರುದಾರರು: ಮುಖ್ಯಾಧಿಕಾರಿಗಳು ಪುರಸಭಾ ಕಾರ್ಯಾಲಯ ಕೃಷ್ಣರಾಜಪೇಟೆ ಟೌನ್ ಕೃಷ್ಣರಾಜಪೇಟೆ ತಾಲ್ಲೂಕು

ಪತ್ರಿಕಾ ಪ್ರಕಟಣೆ

ಮಾನ್ಯ ಘನ ನ್ಯಾಯಾಲಯದಲ್ಲಿ ಅರ್ಜಿದಾರರು ಪ್ರಾರ್ಥಿಸಿಕೊಳ್ಳುವುದೇನೆಂದರೆ, ನಂಜಯ್ಯ ಬಿನ್ ಲೇಟ್ ಕುಳ್ಳಜೋಗಯ್ಯ ರವರು ಮಂಡ್ಯ ಜಿಲ್ಲೆ, ಕೃಷ್ಣರಾಜಪೇಟೆ ತಾಲ್ಲೂಕು, ಕೆಸಬಾ ಹೋಬಳಿ, ಹೊಸಹೊಳಲು ಗ್ರಾಮದ ಅರ್ಜಿದಾರರ ಮನೆಯಲ್ಲಿ ದಿನಾಂಕ:25-8-2024 ರಂದು ಮರಣ ಹೊಂದಿರುತ್ತಾರೆ. ಆದ್ದರಿಂದ ಸದರಿ ನಂಜಯ್ಯ ಬಿನ್ ಲೇಟ್ ಕುಳ್ಳಜೋಗಯ್ಯ ರವರ ಇತರೆ ವಾರಸುದಾರರು ಯಾರಾದರೂ ಇದ್ದರೆ ಮತ್ತು ಅವರ ಮರಣ ದಿನಾಂಕಕ್ಕೆ ಸಂಬಂಧಿಸಿದಂತೆ ಯಾವುದಾದರು ತಂಟೆ ತಕರಾರು ಇದ್ದರೆ ಅವರು ದಿನಾಂಕ: 11-08-2026ರಂದು ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗಿ ತಕರಾರು ಸಲ್ಲಿಸಲು ತಿಳಿಸಲಾಗಿದೆ. ತಪ್ಪಿದ್ದಲ್ಲಿ ಯಾವುದೇ ತಕರಾರು ಇಲ್ಲವೆಂದು ಏಕಪಕ್ಷೀಯವಾಗಿ ನಿರ್ಣಯಿಸಲಾಗುವುದು ಎಂದು ತಿಳಿಸಲಾಗಿದೆ.

ಘನ ನ್ಯಾಯಾಲಯದ ಆಜ್ಞೆಗೆ ಮೇರೆಗೆ
ಶಿರಸ್ತೇದಾರರು ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕೃಷ್ಣರಾಜಪೇಟೆ, ಮಂಡ್ಯ ಜಿಲ್ಲೆ
ಅರ್ಜಿದಾರರ ಪರ ವಕೀಲರು:
ಎಸ್.ಜೆ.ಮಂಜೇಗೌಡ, ವಕೀಲರು, ಕೆ.ಆರ್.ಪೇಟೆ.

ಸಾಲ ವಸೂಲಾತಿ ನ್ಯಾಯಾಧೀಕರಣ-I
ಬೆಂಗಳೂರು
ಬಿಎಸ್ಎನ್ಎಲ್ ಬಿಲ್ಡಿಂಗ್, 4ನೇ ಮಹಡಿ, ಟೆಲಿಫೋನ್ ಹೌಸ್ ಬಿಲ್ಡಿಂಗ್, ರಾಜಭವನ ರಸ್ತೆ, ಬೆಂಗಳೂರು-560001.

ಓ.ಎ. ನಂ. 461/2024

ನಡುವೆ:
ಕೆನರಾ ಬ್ಯಾಂಕ್
ಚಿಕ್ಕಬಳ್ಳಾಪುರ ಶಾಖೆ ...ಅರ್ಜಿದಾರರು
ಮತು
ಶ್ರೀ ಬಿ.ಎ. ಆಂಜನೇಯರೆಡ್ಡಿ ಮತ್ತು ಇತರರು
....ಪ್ರತಿವಾದಿಗಳು

1993ರ ನಿಯಮ 23(viii) ರ ಅಡಿಯಲ್ಲಿ ಸಾಲ ವಸೂಲಾತಿ ನ್ಯಾಯಮಂಡಳಿ (ವಿಧಾನ)ದಂತೆ ಸಮನ್ಸ್ ಪತ್ರಿಕಾ ಪ್ರಕಟಣೆಗಾಗಿ

ಗೆ,
ಡಿ2) ಕುಮಾರಿ ವೀಣಾ
ಬಿನ್ ಬಿ.ಎ. ಆಂಜನೇಯ ರೆಡ್ಡಿ
ಡಿ3) ಶ್ರೀ ಹೇಮಂತ್
ಬಿನ್ ಬಿ.ಎ. ಆಂಜನೇಯ ರೆಡ್ಡಿ
ಡಿ4) ಕುಮಾರಿ ಭಾರ್ಗವಿ
ಬಿನ್ ಬಿ.ಎ. ಆಂಜನೇಯ ರೆಡ್ಡಿ
ಡಿ5) ಕುಮಾರಿ ಜಾನವಿ
ಬಿನ್ ಬಿ.ಎ. ಆಂಜನೇಯ ರೆಡ್ಡಿ
ಇವರೆಲ್ಲರ ವಿಳಾಸ : ಬಚ್ಚರಾಯಪ್ಪನ ತೋಟಗಳು, ಕಂದಕನಹಳ್ಳಿ ಗ್ರಾಮ, ಚಿಕ್ಕಬಳ್ಳಾಪುರ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ-562101.

ಆದಾಗಿ ಅರ್ಜಿದಾರರು ಬ್ಯಾಂಕುಗಳಿಗೆ ಮತ್ತು ಹಣಕಾಸು ಸಂಸ್ಥೆ ಕಾಯ್ದೆ 1993ರಲ್ಲಿ ಪರಿಚ್ಛೇದ 19ರ ಅಡಿಯಲ್ಲಿ ಅನ್ವಯಿಸುವಂತೆ ನಿಮ್ಮಿಂದ ಹಾಗೂ ಇತರರಿಂದ ಬ್ಯಾಂಕಿಗೆ ಬರಬೇಕಾದ ಬಾಕಿ ಮೊತ್ತ **ರೂ. 97,36,482/-** (ರೂಪಾಯಿ ತೊಂಭತ್ತೇಳು ಲಕ್ಷದ ಮುವತ್ಾರು ಸಾವಿರದ ನಾನೂರ ಎಂಭತ್ತೆರಡು ಮಾತ್ರ) ಜೊತೆಗೆ ಪ್ರಸ್ತುತ ಮತ್ತು ಮುಂದಿನ ಬಡ್ಡಿ ಹಾಗೂ ಇತರೆ ಖರ್ಚು-ವೆಚ್ಚಗಳು.

ಮೇಲೆ ತಿಳಿಸಲಾದ ಪ್ರತಿವಾದಿ (ಗಳು) ಈ ಟ್ರಿಬ್ಯೂನಲ್‌ಗೆ ವೈಯಕ್ತಿಕವಾಗಿ ಅಥವಾ ನಿಮ್ಮ ಪ್ರತಿವಾದವನ್ನು ಮಂಡಿಸುವ ವಕೀಲರು ಅಥವಾ ಪ್ರತಿನಿಧಿಯ ಎಜೆಂಟ್ ಮೂಲಕ ಪ್ರಕಟಣೆಯ ದಿನಾಂಕದಿಂದ 30 ದಿನಗಳಲ್ಲಿ ಕಾರಣವನ್ನು ತೋರಿಸಲು ಅವನ/ಅವರ ರಕ್ಷಣೆಗೆ ಬೆಂಬಲವಾಗಿ ಅಥವಾ ದಿನಾಂಕ **17.09.2026ರಂದು** ಬೆಳಗ್ಗೆ 10.30 ಗಂಟೆಗೆ ಹಾಜರಾಗಿ ವಾದಿಗಳ ಕೋರಿಕೆಯಂತೆ ಪರಿಹಾರವನ್ನು ಏಕೆ ನೀಡಬಾರದೆಂದು ಕಾರಣ ನೀಡಬೇಕಾಗಿ ಸೂಚಿಸಲಾಗಿದೆ.

ತಪ್ಪಿದಲ್ಲಿ ಅರ್ಜಿಯನ್ನು ವಿಚಾರಣೆಗೆ ಒಳಪಡಿಸಲಾಗುತ್ತದೆ ಮತ್ತು ದಿನಾಂಕವು ನಿಮ್ಮ ಅನುಪಸ್ಥಿತಿಯಲ್ಲಿ ಉಳಿಯುತ್ತದೆ ಎಂದು ಸೂಚನೆ ನೀಡಲಾಗಿದೆ.

ದಿನಾಂಕ 15.06.2026 ರಂದು ನನ್ನ ಸಹಿ ಮತ್ತು ನ್ಯಾಯಮಂಡಳಿಯ ಮೊಹರಿನೊಂದಿಗೆ ನೀಡಲಾಗಿದೆ.

ಅಸಿಸ್ಟೆಂಟ್ ರಿಜಿಸ್ಟ್ರಾರ್
ಸಾಲ ವಸೂಲಾತಿ ನ್ಯಾಯಾಧೀಕರಣ-I,
ಬೆಂಗಳೂರು-560001.

ಮಹಿಳೆ ಮೇಲೆ ಮಾರಣಾಂತಿಕ ಹಲ್ಲೆ: ಪ್ರತಿಭಟನೆ

ಉದಯಕಾಲ ನ್ಯೂಸ್, ಸರಗೂರು: ತಾಲೂಕಿನ ಕಾಡುಬೆಗೂರು ಗ್ರಾಮದಲ್ಲಿ ಜಮೀನಿನಲ್ಲಿ ಕೃಷಿ ಕೆಲಸ ಮಾಡುತ್ತಿದ್ದ ದಲಿತ ಮಹಿಳೆಯ ಮೇಲೆ ಮಾರಣಾಂತಿಕ ಹಲ್ಲೆ ನಡೆದಿರುವ ಘಟನೆ ಮಂಗಳವಾರ ನಡೆದಿದೆ. ಗ್ರಾಮದ ಮಹಾದೇವ ಅವರ ಪತ್ನಿ ಸುಮಾ ಅವರು ತಮ್ಮ ಜಮೀನಿನಲ್ಲಿ ಕೃಷಿ ಕೆಲಸ ನಿರ್ವಹಿಸುತ್ತಿದ್ದ ವೇಳೆ, ಅದೇ ಗ್ರಾಮದ ಮೇಲ್ವರ್ಗದ ದಾಸಪ್ಪ ಅವರ ಪುತ್ರರಾದ ವಕೀಲ ಜಯಶಂಕರ್, ಸ್ವಾಮಿ ಹಾಗೂ ಇನ್ನೂ ಕೆಲವರು ಏಕಾಏಕಿ ಹಲ್ಲೆ ನಡೆಸಿದ್ದಾರೆ ಎಂದು ಆರೋಪಿಸಲಾಗಿದೆ. ಹಲ್ಲೆಯಿಂದ ಗಾಯಗೊಂಡ ಸುಮಾ ಅವರನ್ನು ಸ್ಥಳೀಯರು ತಕ್ಷಣ ಹೆಚ್.ಡಿ.ಕೋಟೆ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿದ್ದು, ಹೆಚ್ಚಿನ ಚಿಕಿತ್ಸೆಗೆ ಬಳಿಕ ಮೈಸೂರು ಜಿಲ್ಲಾ ಆಸ್ಪತ್ರೆಗೆ ರವಾನಿಸಲಾಗಿದೆ. ಘಟನೆ ಖಂಡಿಸಿ ಸ್ಥಳೀಯರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ದಲಿತ ಮಹಿಳೆ ಮೇಲೆ ಹಲ್ಲೆ ನಡೆಸಿದ ಆರೋಪಿಗಳ ವಿರುದ್ಧ ಎಸ್ಸಿ/ಎಸ್ಟಿ (ದೌರ್ಜನ್ಯ ತಡೆ) ಕಾಯ್ದೆಯಡಿ ಪ್ರಕರಣ ದಾಖಲಿಸಿ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಅವರು ಆಗ್ರಹಿಸಿದ್ದಾರೆ. ಈ ಸಂಬಂಧ ಸರಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಟಾಟಾ ಕ್ಯಾಪಿಟಲ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್
ನೋಂದಣಿ. ಕಚೇರಿ: 11ನೇ ಮಹಡಿ, ಟವರ್ ಎ, ಪೆನಿನ್ಸುಲಾ ಬಿಸಿನೆಸ್ ಪಾರ್ಕ್, ಗಣಪತ್ರಾವ್ ಕದಮ್ ಮಾರ್ಗ, ಲೋವರ್ ಪರೇಲ್, ಮುಂಬೈ-400013.
ಸಂಪರ್ಕ ಸಂಖ್ಯೆ (022) 61827414, (022) 61827375
CIN No. U67190MH2008PLC187552.

ಬೇಡಿಕೆ ಸೂಚನೆ

2002 ರ ಹಣಕಾಸು ಆಸ್ತಿಗಳ ಸೆಕ್ಯುರಿಟೈಸೇಶನ್ ಮತ್ತು ಪುನರ್ನಿರ್ಮಾಣ ಮತ್ತು ಭದ್ರತಾ ಹಿತಾಸಕ್ತಿ ಕಾಯ್ದೆಯ ಜಾರಿ ಕಾಯ್ದೆ, 2002 ರ ("ಕಾಯ್ದೆ") ಸೆಕ್ಷನ್ 13 (2) ರ ಅಡಿಯಲ್ಲಿ, ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002 ರ ("ನಿಯಮಗಳು") ನಿಯಮ 3 ರೊಂದಿಗೆ ಓದಲಾಗಿದೆ.

ಕೆಳಗೆ ಸಹಿ ಮಾಡಿರುವವರು ಟಾಟಾ ಕ್ಯಾಪಿಟಲ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯಾಗಿರುವುದರಿಂದ ಮತ್ತು ನಿಯಮಗಳ 3 ರೊಂದಿಗೆ ಓದಲಾದ ಸೆಕ್ಷನ್ 13 (12) ರ ಅಡಿಯಲ್ಲಿ ನೀಡಲಾದ ಅಧಿಕಾರಗಳನ್ನು ಚಲಾಯಿಸುವಾಗ, ಕಾಯ್ದೆಯ ಸೆಕ್ಷನ್ 13 (2) ರ ಅಡಿಯಲ್ಲಿ ಕೆಳಗೆ ದಿನಾಂಕದಂದು ವಿವರವಾದ ಡಿಮ್ಯಾಂಡ್ ನೋಟಿಸ್ ಅನ್ನು ಈಗಾಗಲೇ ಹೊರಡಿಸಲಾಗಿದೆ, ಸಾಲಗಾರರು/ಸಹ-ಸಾಲಗಾರರು/ಖಾತೆದಾರರು (ಎಲ್ಲರನ್ನು ಏಕ ಅಥವಾ ಒಟ್ಟಾಗಿ "ಬಾಧ್ಯಸ್ಥರು" ಎಂದು ಉಲ್ಲೇಖಿಸಲಾಗಿದೆ)/ಕಾನೂನು ಉತ್ತರಾಧಿಕಾರಿಗಳು/ಕಾನೂನು ಪ್ರತಿನಿಧಿಗಳು ಇಲ್ಲಿ ಪಟ್ಟಿ ಮಾಡಲಾದ ಡಿಮ್ಯಾಂಡ್ ನೋಟಿಸ್‌ನಲ್ಲಿ ಉಲ್ಲೇಖಿಸಲಾದ ಮೊತ್ತವನ್ನು ಆಯಾ ಸೂಚನೆಯ ದಿನಾಂಕದಿಂದ 60 ದಿನಗಳ ಒಳಗೆ ಪಾವತಿಸಲು ಕರೆ ನೀಡಲಾಗಿದೆ. ಈ ಸೂಚನೆಗಳಿಗೆ ಪ್ರತಿಗಳನ್ನು ನೋಂದಾಯಿತ ಅಂಚೆ ಮೂಲಕ ನೀಡಲಾಗುತ್ತದೆ ಮತ್ತು ಕೆಳಗೆ ಸಹಿ ಮಾಡಿರುವವರಿಗೆ ಲಭ್ಯವಿದೆ. ಮತ್ತು ಈ ಸಾಲಗಾರರು/ಕಾನೂನು ಉತ್ತರಾಧಿಕಾರಿಗಳು/ಕಾನೂನು ಪ್ರತಿನಿಧಿಗಳು, ಅವರು ಬಯಸಿದರೆ, ಸಾಮಾನ್ಯ ಕಚೇರಿ ಸಮಯದಲ್ಲಿ ಯಾವುದೇ ಕೆಲಸದ ದಿನದಂದು ಕೆಳಗೆ ಸಹಿ ಮಾಡಿರುವವರಿಂದ ಸಂಬಂಧಿತ ಪ್ರತಿಯನ್ನು ಸಂಗ್ರಹಿಸಬಹುದು. ಇದಕ್ಕೆ ಸಂಬಂಧಿಸಿದಂತೆ, ಮತ್ತೊಮ್ಮೆ ಸೂಚನೆಯನ್ನು ನೀಡಲಾಗಿದೆ. ಸಂಬಂಧಿತ ಸೂಚನೆ/ನೋಟಿಸ್ ದಿನಾಂಕದಿಂದ 60 ದಿನಗಳ ಒಳಗೆ, ಕೆಳಗೆ ಸೂಚಿಸಲಾದ ಮೊತ್ತವನ್ನು ಅವರ ಹೆಸರಿನ ವಿರುದ್ಧ, ಕೆಳಗೆ ವಿವರಿಸಿದಂತೆ ಹೆಚ್ಚಿನ ಬಡ್ಡಿಯೊಂದಿಗೆ, ಕಾಲಮ್ (ಡಿ) ನಲ್ಲಿ ಕೆಳಗೆ ಉಲ್ಲೇಖಿಸಲಾದ ಆಯಾ ದಿನಾಂಕಗಳಿಂದ ಸಾಲ ಒಪ್ಪಂದದೊಂದಿಗೆ ಓದಿದ ಪಾವತಿ ಮತ್ತು / ಅಥವಾ ಸಾಕ್ಷಾತ್ಕಾರದ ದಿನಾಂಕದವರೆಗೆ ಮತ್ತು ಸಾಲಗಾರರು ಕಾರ್ಯಗತಗೊಳಿಸಿದ ಇತರ ದಾಖಲೆಗಳು/ಬರಹಗಳು, ಯಾವುದಾದರೂ ಇದ್ದರೆ). ಸಾಲದ ಸರಿಯಾದ ಮರುಪಾವತಿಗೆ ಭದ್ರತೆಯಾಗಿ, ಈ ಕೆಳಗಿನ ಸುರಕ್ಷಿತ ಆಸ್ತಿ(ಗಳನ್ನು) ಸದರಿ ಸಾಲಗಾರರು ಕ್ರಮವಾಗಿ **TCHFL** ಗೆ ಅಡಮಾನ ಇಟ್ಟಿದ್ದಾರೆ.

ಸಾಲ ಖಾತೆ ಸಂಖ್ಯೆ	ಋಣಭಾರದಾರರು/ಉತ್ತರಾಧಿಕಾರಿಗಳು/ ಕಾನೂನು ಪ್ರತಿನಿಧಿಗಳ ಹೆಸರು	ಮೊತ್ತ ಮತ್ತು ಬೇಡಿಕೆ ಸೂಚನೆಯ ದಿನಾಂಕ	ಬೇಡಿಕೆ ಸೂಚನೆಯ ದಿನಾಂಕ & NPA ದಿನಾಂಕ
TCHHL 0455000100297237, TCHIN 0455000100300096	ಮುಕುಂದ ಎನ್ (ಸಾಲಗಾರರು) ಶ್ರೀಮತಿ ಲೀಲಾವತಿ ಎಸ್ (ಸಹ-ಸಾಲಗಾರರು)	ರೂ.1,25,516/- (ಒಂದು ಲಕ್ಷ ರೂಪಾಯಿಗಳು ಇಪ್ಪತ್ತೈದು ಸಾವಿರ ಐನೂರ ಹದಿನಾರು ಮಾತ್ರ) 10.07.2026 ರಂತೆ	10.07.2026 and 04.07.2022

ಆಸ್ತಿಯ ವಿವರ: ನಿವೇಶನ ಸಂಖ್ಯೆ 45, ಜುಂಜೂರ್ ಸಂಖ್ಯೆ 609, ಆಸ್ತಿಯ ವಿಶಿಷ್ಟ ಸಂಖ್ಯೆ 152200200705022852 ಹೊಂದಿರುವ ಆಸ್ತಿಯ ಎಲ್ಲಾ ಭಾಗ ಮತ್ತು ಭಾಗ, ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನ ಮನುಗನಹಳ್ಳಿ ಗ್ರಾಮ ಪಂಚಾಯಿತಿಯ ಅಂಕನಹಳ್ಳಿ